

# ನವರತ್ನಗಳ ಲೋಕದಲ್ಲಿ ಪಚ್ಚೆ ವಿಹಾರ

**ಎಮರಾಲ್ಡ್ ಅಥವಾ ಪಚ್ಚೆಕಲ್ಲು ನವರತ್ನಗಳಲ್ಲಿ ಒಂದು. ಚಿನ್ನದ ಮೇಲೆ ಹಸುರು ಬಣ್ಣದ ಹೊಳೆಯುವ ಹರಳು ಎಲ್ಲ ಬಣ್ಣದ ಉಡುಗೆಗಳಿಗೂ ಮ್ಯಾಚ್ ಆಗುವಂಥವು. ಪಚ್ಚೆಹರಳಿನ ಆಭರಣದ ಕುರಿತ ವಿಶ್ಲೇಷಣೆ ಇಲ್ಲಿದೆ.**

■ **ಕೃಷ್ಣವೇಣಿ ಪ್ರಸಾದ್ ಮುಳಿಯ**

ತಿಜೋರಿಯಲ್ಲಿ ಎಷ್ಟೇ ಒಡವೆಗಳ ಸೆಟ್ ಇದ್ದರೂ ಎಮರಾಲ್ಡ್ ಎಂಬ ಪಚ್ಚೆ ಹರಳುಗಳಿರುವ ಕಿವಿಯೋಲೆ, ಉಂಗುರ, ನೆಕ್ಲೇಸ್, ಬ್ರೇಸ್‌ಲೆಟ್‌ಗಳ ಸೆಟ್ ಇರದಿದ್ದರೆ ಹೇಗೆ ಎಂಬುದು ಆಭರಣಪ್ರಿಯ ಮಹಿಳೆಯರ ಲೆಕ್ಕಾಚಾರ. ಇದಕ್ಕೆ ಇಂಬುಕೊಡಲೆಂದೇ ಒಡವೆ ವರ್ತಕರು ಹತ್ತು ಹಲವು ವೈವಿಧ್ಯದ ಎಮರಾಲ್ಡ್ ಸೆಟ್ ಅನ್ನು ಮಾರುಕಟ್ಟೆಗೆ ತಂದಿದ್ದಾರೆ.

ಸಾಮಾನ್ಯವಾಗಿ ಮಹಿಳೆಯರು ಮತ್ತಷ್ಟು ಇಷ್ಟಪಡುವುದು ರೂಬಿ, ಮಾಣಿಕ್ಯ, ವಜ್ರ, ಮುತ್ತು, ಪಚ್ಚೆ ಹರಳುಗಳಿಂದ ತಯಾರಿಸಿದ ಆಭರಣಗಳನ್ನೇ. ಇವೆಲ್ಲವೂ ಗ್ರ್ಯಾಂಡ್ ಲುಕ್ ನೀಡಲು ಸಹಕಾರಿ. ಇವು ಜನರ ಸಮಕಾಲೀನ ಭಾವನೆಗಳಿಗೆ ಸ್ಪಂದಿಸುವಂತಿರುವ ಕಾರಣ ಆಭರಣ ಮಳಿಗೆಯಲ್ಲಿ ಹೆಚ್ಚು ಬೇಡಿಕೆ ಪಡೆದಿರುವುದು ನವರತ್ನ ಸೆಟ್‌ಗಳಿಗೆ ಮತ್ತು ಬಿಡಿಬಿಡಿಯಾಗಿರುವ ಅಮೂಲ್ಯ ಹರಳುಗಳ ಸೆಟ್‌ಗಳಿಗೆ. ಇದಕ್ಕೆ ಕಾರಣ ಹರಳುಗಳು, ಮುತ್ತುಗಳು, ಚಿನ್ನ ಮತ್ತು ಬೆಳ್ಳಿ ಎಲ್ಲವನ್ನೂ ಕಲ್ಪನೆಗೂ ನಿಲುಕದ ವಿನ್ಯಾಸಗಳಲ್ಲಿ ಕಸೂತಿ ಮಾಡಿರುವುದು, ಅದರಲ್ಲೂ ಪಾರಂಪರಿಕ ಸಂಗ್ರಹದ ಪ್ರತಿಯೊಂದು ಆಭರಣವೂ ಸಹ ನೈಜ ಕರಕೌಶಲ್ಯದ ಫಲವಾಗಿದೆ.